**ಶಾಲೆ: ಎಂ.ಎ.ಆರ್.ಪಿ. ಆಡುಗೋಡಿ**

೭ನೇ ತರಗತಿಯ, ಎಂ.ಎ.ಆರ್.ಪಿ. ಆಡುಗೋಡಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಒಬ್ಬ ವಿದ್ಯಾರ್ಥಿನಿ. ಆಕೆ ತರಗತಿಯಲ್ಲಿ, ಬಹಳ ಲವಲವಿಕೆಯಿಂದ ಮತ್ತು ಚುರುಕುತನದಿಂದಿರುವವಳು. ಆರಂಭದಲ್ಲಿ ಅವಳು ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸಿದ್ದು ಕಡಿಮೆ. ಆಕೆಯ ಜೊತೆ ಮಾತನಾಡಿ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳಲು ಫೆಸಿಲಿಟೇಟರ್ಸ್ ಬಹಳ ಪ್ರಯತ್ನಪಟ್ಟರು. ಆದರೆ ಕೆಲವು ದಿನಗಳಿಂದ ಚಿತ್ರಕಲೆಯಲ್ಲಿ ಅವಳ ಭಾಗವಹಿಸುವಿಕೆ ಹೆಚ್ಚಾಗಿದ್ದು, ಆಕೆಯಲ್ಲಿ ಬದಲಾವಣೆ ಕಂಡುಬಂದಿದೆ. ಈ ಬದಲಾವಣೆ ಶಾಲೆಗೆ ಸೀಮಿತವಾಗದೆ ಮನೆಯಲ್ಲೂ ಕಂಡುಬಂದಿದೆ.

ಚಿತ್ರಕಲೆಯಿಂದಾಗಿ ಆಕೆಯ ಜೀವನದ ಕೌಶಲ್ಯಗಳು ಅಭಿವೃದ್ಧಿ ಪಡೆದಿದ್ದು, ಆಕೆಯ ನಡವಳಿಕೆ, ನಾಯಕತ್ವದ-ಗುಣ ಮತ್ತು ಜವಾಬ್ದಾರಿ, ಅವಳ ಸುತ್ತಲು ಇರುವವರ ಜೀವನದ ಮೇಲೆ ಒಳ್ಳೆಯ ಪರಿಣಾಮ ಬೀರಿದೆ . ಮೊದಲು ಅಕ್ಕ ತಂಗಿಯರಿಬ್ಬರೂ ಎಲ್ಲದಕ್ಕೂ ಜಗಳವಾಡುತ್ತಿದ್ದರು. ಆದರೆ ಈಗ ಅವಳು ಬಹಳ ಶಾಂತವಾಗಿರುತ್ತಾಳೆ ಎಂದು ಆಕೆಯ ತಾಯಿ ಹೇಳಿಕೊಳ್ಳುತ್ತಾರೆ. ತನ್ನ ತಂಗಿಗೆ ಓದುವುದರಲ್ಲಿ ಸಹಾಯ ಮಾಡುವುದಲ್ಲದೇ, ಶಿಕ್ಷಣ ಮತ್ತು ಚಿತ್ರಕಲೆಯಲ್ಲಿ ಬೆಂಬಲವನ್ನು ನೀಡುತ್ತಿದ್ದಾಳೆ. ತಾಯಿಗೂ ಕೂಡ ತಾನು ಕಲಿತಿದ್ದನು ಹೇಳಿಕೊಡಲು ಮುಂದುವರಿದಿರುವುದು ತಾಯಿಗೆ ಬಹಳ ಸಂತೋಷ ಮತ್ತು ಹೆಮ್ಮೆ ತಂದುಕೊಟ್ಟಿದೆ.

